# ಕಲ್ಪನೆ



ಅತ್ತ ನೋಡಿದರೆ ನೀಲಾಕಾಶವನ್ನೂ ನೀರನ್ನೂ ಬೇರ್ಪಡಿಸಲಾರದಂತೆ ವಿಶಾಲವಾಗಿ ಹರಡಿಕೊಂಡಿರುವ ಸಮುದ್ರ. ಕ್ಷಣವೊಂದನ್ನೂ ಬಿಡದೇ ಕಿನಾರೆಗೆ ಬಂದು ಅಪ್ಪಳಿಸುತ್ತ, ವಾಚಾಳಿಯಂತೆ ಮಾತನಾಡುತ್ತಿರುವ ಅಲೆಗಳು ಮೊರೆಯುವ ಸದ್ದು. ಅಪ್ಪನ ಬೆಚ್ಚಗಿನ ಆಸರೆಯಲ್ಲಿ ಇಷ್ಟೆತ್ತರದ ಒಂಟೆ ಡುಬ್ಬದ ಬಳಿ ಕುಳಿತು ಸವಾರಿ ಹೋಗುವ ಪುಟಾಣಿಯ ಖುಷಿಗೆ ಪಾರವೇ ಇಲ್ಲ. ಸೂರ್ಯಾಸ್ತವನ್ನು ನೋಡಲು ಜಮಾಯಿಸಿರುವ ಜನರೂ ಎಲ್ಲ ಜಂಜಡವನ್ನೂ ಮರೆತು ಸಮುದ್ರದ ಕಾರುಬಾರನ್ನೂ ಸಂಜೆಯ ಆಗಸವನ್ನೂ ನೋಡಲು ಕಾತರರಾಗಿದ್ದಾರೆ. ಈ ದೃಶ್ಯವನ್ನು ನೋಡಿದಾಗ ನಿಮಗೆ ಕವಿತೆಯ ಸಾಲೇನಾದರೂ ಹೊಳೆಯಿತೇ? ಹಾಗಿದ್ದರೆ ಆ ಕವಿತೆಯನ್ನು ಬರೆದು ನಮಗೆ ಕಳುಹಿಸಿ. ನಮಗೆ ನಿಮ್ಮ ಕಲ್ಪನೆಯ ಕವಿತೆ ತಲುಪಲು ಕೊನೆಯ ದಿನಾಂಕ ನವೆಂಬರ್ 15.

ಚಿತ್ರ: ಫಕ್ರುದ್ದೀನ್ ಎಚ್

---

ವಿಳಾಸ: ಕಲ್ಪನೆ ವಿಭಾಗ, ‘ಮಯೂರ’
ನಂ 75, ಮಹಾತ್ಮ ಗಾಂಧಿ ರಸ್ತೆ,
ಬೆಂಗಳೂರು–560 001
ಇ–ಮೇಲ್: editormy@mayura.co.in